# ಆದ್ಯಾಶಕ್ತಿ



✻ ಬ್ರಹ್ಮ ನಿಷ್ಕ್ರಿಯ. ಯಾವಾಗ ಆತ ಸೃಷ್ಟಿ, ಸ್ಥಿತಿ, ಪ್ರಳಯಕಾರ್ಯ ಇವೇ ಮೊದಲಾದವುಗಳನ್ನು ಮಾಡುತ್ತಾನೊ ಆಗ ಆತನಿಗೆ 'ಆದ್ಯಾಶಕ್ತಿ' ಎಂದು ಹೆಸರು. ಆ ಆದ್ಯಾಶಕ್ತಿಯನ್ನು ಪ್ರಸನ್ನಳನ್ನಾಗಿ ಮಾಡಿಕೊಳ್ಳಬೇಕು. ಚಂಡಿಯಲ್ಲಿ ಹೇಳಿರುವುದು ನಿನಗೆ ಗೊತ್ತಿಲ್ಲವೆ? ದೇವತೆಗಳು ಮೊದಲು ಆದ್ಯಾಶಕ್ತಿಯನ್ನು ಸ್ತುತಿಸಿದರು. ಆಕೆ ಪ್ರಸನ್ನಳಾದರೆ ಮಾತ್ರ ಹರಿಯೋಗನಿದ್ರೆಯಿಂದ ಎಚ್ಚರಗೊಳ್ಳುತ್ತಾನೆ.

✻ ವ್ಯಾಕುಲನಾಗಿ ಭಗವತಿಯನ್ನು ಕರೆ. ಆಕೆಯ ದರ್ಶನ ದೊರೆತರೆ ವಿಷಯರಸ ಒಣಗಿಹೋಗಿ ಬಿಡುತ್ತದೆ; ಕಾಮಕಾಂಚನ ಆಸಕ್ತಿ ಎಲ್ಲಾ ಬಿಟ್ಟುಹೋಗುತ್ತದೆ. ಆಕೆ ನಿನ್ನ ಸ್ವಂತ ತಾಯಿ ಎಂಬ ಬೋಧೆ ಉಂಟಾದರೆ ಈ ಕ್ಷಣವೆ ಹಾಗಾಗಿಬಿಡುತ್ತದೆ. ಆಕೆ ನಿನ್ನ 'ದೇವಮಾತೆ' ಅಲ್ಲ, ನಿನ್ನ ಸ್ವಂತ ಮಾತೆಯೆ. ವ್ಯಾಕುಲನಾಗಿ ಹಟಹಿಡಿದು ಆಕೆಯನ್ನು ಕೇಳು.

✻ ಜನ ಹೇಳುತ್ತಾರೆ, 'ತಾಯಿಯ ಒಲವು ತಂದೆಯದಕ್ಕಿಂತ ಅಧಿಕ' ಅಂತ. ತಾಯಿಯನ್ನು ಬಲಾತ್ಕರಿಸಿ ಕೇಳಬಹುದು, ಆದರೆ ತಂದೆಯೊಡನೆ ಅದು ನಡೆಯದು... ತಾಯಿಯ ಹಣದ ಮೇಲೆ ಮಗ ಕೈ ಇಡಲು ಸಾಧ್ಯ. ಜನ ಒಂದನ್ನು ಹೇಳುತ್ತಾರಲ್ಲ, 'ಮಗನ ಮೇಲೆ ಮೊಕದ್ದಮೆ ಹೂಡಲು ತಾಯಿಗೆ ಕೋರ್ಟಿನ ಅನುಮತಿ ದೊರಕದು' ಅಂತ.

✻ ಯಾರು ಬ್ರಹ್ಮನೊ ಆತನೇ ಕಾಳಿ, ಭಗವತಿ, ಆದ್ಯಾಶಕ್ತಿ. ನಿಷ್ಕ್ರಿಯನಾಗಿರುವಾಗ ಆತನಿಗೆ ಬ್ರಹ್ಮ ಎಂದು ಹೆಸರು. ಯಾವಾಗ ಸೃಷ್ಟಿ ಸ್ಥಿತಿ ಪ್ರಳಯ ಈ ಕಾರ್ಯಗಳನ್ನು ಮಾಡುತ್ತಾನೊ ಆಗ ಆತನಿಗೆ ಶಕ್ತಿ ಎಂದು ಹೆಸರು. ಸ್ಥಿರ ಜಲ ಬ್ರಹ್ಮನ ಉಪಮೆ. ಅಲೆಯಾಕಾರದಲ್ಲಿ ಎದ್ದು ಬೀಳುವ ಜಲ ಶಕ್ತಿಯ ಅಥವಾ ಕಾಳಿಯ ಉಪಮೆ. ಹಾಗಾದರೆ ಕಾಳಿ ಎಂಬವಳು ಯಾರು? ಯಾರು ಮಹಾಕಾಲನೊಡನೆ (ಬ್ರಹ್ಮನೊಡನೆ) ರಮಿಸುತ್ತಾಳೊ ಅವಳು. ಆಕೆ ಸಾಕಾರಳೂ ಹೌದು, ನಿರಾಕಾರಳೂ ಹೌದು. ನಿಮಗೆ ನಿರಾಕಾರದಲ್ಲಿ ವಿಶ್ವಾಸವಿರುವುದಾದರೆ ಕಾಳಿಯನ್ನು ಆ ರೂಪಿನಿಂದ ಚಿಂತನೆ ಮಾಡಿ. ಯಾವುದಾದರೂ ಒಂದನ್ನು ಹಿಡಿದು ಆಕೆಯ ಚಿಂತನೆ ಮಾಡಿದರೆ ತಾನು ಏನೇನು ಎಂಬುದನ್ನು ಆಕೆಯೇ ತೋರಿಸಿಕೊಟ್ಟುಬಿಡುತ್ತಾಳೆ.

ಶ್ಯಾಮಪುಕುರಕ್ಕೆ ಹೋಗಿ ತಲುಪಿದರೆ ತೇಲಿಕೊಪ್ಪಲು ಎಲ್ಲಿದೆ ಅನ್ನುವುದೂ ಗೊತ್ತಾಗಿಬಿಡುತ್ತದೆ. ಆಗ ಆಕೆಯ ಇರುವಿಕೆಯ ಅನುಭವ ದೊರೆಯುವುದೊಂದೇ ಅಲ್ಲ, ನಾನು ನಿಮ್ಮೊಡನೆ ಮಾತನಾಡುತ್ತಿರುವಂತೆ ಆಕೆ ನಿಮ್ಮ ಹತ್ತಿರ ಬಂದು ನಿಮ್ಮೊಡನೆ ಮಾತನಾಡುವುದರ ಅನುಭವವೂ ದೊರೆಯುತ್ತದೆ.

✻ ಶ್ರೀಕೃಷ್ಣ ಪುರುಷ; ಶ್ರೀಮತಿ ಆತನ ಶಕ್ತಿ — ಆದ್ಯಾಶಕ್ತಿ. ಪುರುಷ ಮತ್ತು ಪ್ರಕೃತಿ. ಯುಗಲಮೂರ್ತಿ ಎಂದರೆ ಅರ್ಥವೇನು? ಪುರುಷನಿಗೂ ಪ್ರಕೃತಿಗೂ ಅಭೇದ ಅಂತ; ಅವರಿಬ್ಬರಿಗೂ ಯಾವ ಭೇದವೂ ಇಲ್ಲ ಅಂತ. ಪ್ರಕೃತಿರಹಿತನಾಗಿ ಪುರುಷನಿರಲಾರ; ಪುರುಷರಹಿತಳಾಗಿ ಪ್ರಕೃತಿಯಿರಲಾರಳು. ಒಂದನ್ನು ಪ್ರಸ್ತಾಪಿಸಿತು ಅಂದರೆ ಅದರೊಡನೆಯೇ ಮತ್ತೊಂದು ಇರುವುದನ್ನೂ ಭಾವಿಸಲೇಬೇಕು. ಇದು ಅಗ್ನಿ ಮತ್ತು ಅದರ ದಾಹಕ ಶಕ್ತಿಯ ಹಾಗೆ, ಅಗ್ನಿಯನ್ನು ಬಿಟ್ಟು ದಾಹಕ ಶಕ್ತಿಯನ್ನು ಭಾವಿಸುವುದಕ್ಕೆ ಆಗುವುದಿಲ್ಲ. ಅದಕ್ಕಾಗಿಯೇ ಯುಗಲ ಮೂರ್ತಿಯಲ್ಲಿ ಶ್ರೀಕೃಷ್ಣನ ದೃಷ್ಟಿ ರಾಧೆಯ ಕಡೆಗೆ ಇರುವುದು, ರಾಧೆಯ ದೃಷ್ಟಿ ಶ್ರೀಕೃಷ್ಣನ ಕಡೆಗೆ ಇರುವುದು. ಶ್ರೀಮತಿಯದು ವಿದ್ಯುತ್ತಿನೋಪಾದಿಯ ಗೌರವರ್ಣ; ಅದಕ್ಕಾಗಿಯೇ ಶ್ರೀಕೃಷ್ಣ ಪೀತಾಂಬರ ಉಡುವುದು. ಶ್ರೀಕೃಷ್ಣನ ವರ್ಣ ನೀಲಮೇಘದ ವರ್ಣ; ಅದಕ್ಕಾಗೇ ಶ್ರೀಮತಿ ನೀಲಾಂಬರ ಉಡುವುದು, ನೀಲರತ್ನಗಳಿಂದ ಅಂಗಾಂಗಗಳನ್ನು ಸಿಂಗರಿಸಿಕೊಳ್ಳುವುದು. ಶ್ರೀಮತಿ ಕಾಲಿಗೆ ಗೆಜ್ಜೆ ಕಟ್ಟುತ್ತಾಳೆ; ಅದಕ್ಕಾಗೇ ಶ್ರೀಕೃಷ್ಣನೂ ಕಾಲಿಗೆ ಗೆಜ್ಜೆ ಕಟ್ಟುತ್ತಾನೆ. ಅಂದರೆ ಪ್ರಕೃತಿಪುರುಷರಲ್ಲಿ ಆಂತರಿಕವಾಗಿ ಬಾಹ್ಯವಾಗಿ ಸಂಪೂರ್ಣ ಸಾಮರಸ್ಯವಿದೆ.

✻ **ನರೇಂದ್ರ:** ಏಕೆ ಹೀಗಾಯಿತು? ನಾನು ಕಾಳಿಯ ಧ್ಯಾನವನ್ನು ಮೂರು ನಾಲ್ಕು ದಿವಸ ಮಾಡಿದೆ. ಆದರೆ ಯಾವ ಫಲವೂ ನನಗೆ ದೊರೆಯಲೇ ಇಲ್ಲವಲ್ಲ!

**ಶ್ರೀರಾಮಕೃಷ್ಣರು:** ಕ್ರಮೇಣ ದೊರೆಯುತ್ತದೆ. ಕಾಳಿ ಎಂಬುವವಳು ಮತ್ತೆ ಬೇರೆ ಏನೂ ಅಲ್ಲ, ಯಾರು ಬ್ರಹ್ಮನೊ ಆತನೇ ಕಾಳಿ. ಕಾಳಿ ಎಂಬುವವಳೇ ಆ ಶಕ್ತಿ. ಯಾವಾಗ ಭಗವಂತ ನಿಷ್ಕ್ರಿಯನೋ ಆಗ ಆತನಿಗೆ ಬ್ರಹ್ಮ ಅಂತ ಹೆಸರು. ಯಾವಾಗ ಆತ ಸೃಷ್ಟಿ ಸ್ಥಿತಿ ಪ್ರಳಯ ಕಾರ್ಯಗಳನ್ನು ಮಾಡುತ್ತಾನೋ ಆಗ ಆತನಿಗೇ ಶಕ್ತಿ ಅಂತ ಹೆಸರು. ಯಾರನ್ನು ನೀನು ಬ್ರಹ್ಮ ಅಂತ ಕರೆಯುತ್ತೀಯೋ, ಆತನನ್ನೇ ನಾನು ಕಾಳಿ ಅಂತ ಕರೆಯುತ್ತೇನೆ.

'ಶ್ರೀರಾಮಕೃಷ್ಣ ವಚನವೇದ'ದಿಂದ